ಕೊಟ್ಟಿರೇನು?" ಕೇಳಿದೆ.

"ಅಮ್ಮ ಕೊಡ್ತೀನಿ ಅಂದ್ರು. ಅಜ್ಜಿನೇ ಬೇಡ ಅಂದ್ರು" ಸ್ವಾತಿ, ಕೊನೆಯ ಮಗಳು ಅಣಿಮುತ್ತು ಉದುರಿಸಿದಳು.

"ನಾನೇ ಏನೂ ಕೊಡಬೇಡ ಅಂದೆ. ಯಾರೋ ಏನೋ ಗೊತ್ತಿಲ್ಲ, ಯಾಕೋ ಕೊಡಬೇಕು?" ಮೊಮ್ಮಗಳ ದೂರಿಗೆ ಅಜ್ಜಿಯ ಸಮರ್ಥನೆ.

ಈ ಹೆಂಗಸರ ಬುದ್ಧಿಯೇ ಇಷ್ಟು ಎಂದು ಗೊಣಗಿಕೊಂಡು, "ನಿಮ್ಮ ತಲೇಲಿ ಜೇಡಿ ಮಣ್ಣು ತುಂಬಿಕೊಂಡಿದೆಯೇನು? ವಯಸ್ಸಾಗಿರೋರು. ತಿನ್ನೋದಕ್ಕೆ ಕೊಡದೇ ಹೋದ್ರು ಹೋಗ್ಲಿ ಕುಡಿಲಿಕ್ಕಾದ್ರೂ ಕೊಡಬಾರದೇ?" ಸಣ್ಣಗೆ ಸಿಡುಕಿದೆ.

ಅಸಮಾಧಾನದಿಂದಲೇ ಜ್ಯೋತಿ ನಮ್ಮಿಬ್ಬರಿಗೂ ಚಹಾ ಕೊಟ್ಟಳು. ಅವರು ಯಾವುದೇ ತೆರನಾದ ಸಂಕೋಚವೂ ಇಲ್ಲದೇ, ಚಹಾ ಸೇವಿಸತೊಡಗಿದರು.

"ತಾವ್ಯಾರು ಗೊತ್ತಾಗಲಿಲ್ಲ?" ಎಂದೆ.

"ನಾನಿರೋದು ಮುಂಬೈನಲ್ಲಿ. ನಿಮಗೆ ದೊಡ್ಡಪ್ಪನಾಗಬೇಕು. ಅಂದರೆ ನಿಮ್ಮ ಅಪ್ಪನ ದೊಡ್ಡಪ್ಪನ ಎರಡನೇ ಮಗ."

ಗೊತ್ತಾಗಲಿಲ್ಲ ಎಂದು ತಲೆ ಆಡಿಸಿದೆ.

"ನಿಮ್ಮ ತಾತನಿಗೆ ಅಣ್ಣ ಒಬ್ಬರಿದ್ದರು. ಅವರ ಹೆಸರು ರಾಜಣ್ಣ ಅಂತ."

"ಅವರು ದೊಡ್ಡ ಜಮೀನ್ದಾರರು ಅಂತ ಕೇಳಿದ್ದೇನೆ. ಅವರ ಮಕ್ಕಳು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಉತ್ತಮ ಸ್ಥಿತಿಯಲ್ಲಿ ಇದ್ದಾರೆಂದೂ ತಿಳಿದಿದ್ದೇನೆ" ನಾನು ಜ್ಞಾಪಿಸಿಕೊಳ್ಳುತ್ತಾ ಹೇಳಿದೆ.

ಆ ವೃದ್ಧನ ಮುಖದಲ್ಲಿ ಸೊಟ್ಟಗೆ ಒಂದು ಸಣ್ಣ ಕಿರುನಗೆ ಮೂಡಿತು.

"ಹೌದು ಅವರೆಲ್ಲಾ ಅನುಕೂಲದಿಂದಿದ್ದಾರೆ. ಎಲ್ಲರೂ ಸುಖವಾಗಿದ್ದಾರೆ. ಇಷ್ಟು ಬಿಟ್ಟು ಮತ್ತೇನು ನಿನಗೆ ತಿಳಿದಿದೆ?"

'ಇಲ್ಲ' ಎನ್ನುವಂತೆ ತಲೆ ಆಡಿಸಿದೆ. ನನ್ನ ಕೆಲಸ ಕಾರ್ಯಗಳ ಬಗ್ಗೆ ವಿಚಾರಿಸಿದರು. ಮುಂಬೈನಲ್ಲಿ ತಾವು ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡಿರುವುದಾಗಿ ಹೇಳಿದರು. ತಮ್ಮ ಉದ್ಯಮದ ಏಳುಬೀಳುಗಳು, ಕಷ್ಟನಷ್ಟಗಳ ಬಗ್ಗೆ ಹೇಳುತ್ತಾ ಹೋದರು. ಕಳೆದ ವರ್ಷದಿಂದ ಉತ್ತರ ಭಾರತದ ಪ್ರಮುಖ ಊರುಗಳಿಗೆ, ದೇವಸ್ಥಾನಗಳಿಗೆ ಭೇಟಿ ನೀಡುತ್ತಿರುವುದಾಗಿ ಹೇಳಿದರು. ಮೂರ್ನಾಲ್ಕು ತಿಂಗಳಿಂದ ಕರ್ನಾಟಕದಲ್ಲಿರುವ ತಮ್ಮ ಸಂಬಂಧಿಕರ ವಿವರಗಳನ್ನು ಕಲೆಹಾಕಿ ಭೇಟಿ ಮಾಡುತ್ತಿರುವುದಾಗಿ ಹೇಳಿದರು. ರಾತ್ರಿ ಊಟವಾದ ಮೇಲೆ ವೃದ್ಧರಿಗೆ ಮಲಗಲು ವ್ಯವಸ್ಥೆ ಮಾಡಿಕೊಟ್ಟು ಬಂದೆ.

ನಾನು ಏಳುವ ಮುಂಚೆಯೆ ಧರಣೇಂದ್ರಯ್ಯ ಎದ್ದು ಕೈಕಾಲು ಮುಖ ತೊಳೆದುಕೊಂಡು ವರಾಂಡದಲ್ಲಿ ದಿನ ಪತ್ರಿಕೆ ಓದುತ್ತಾ ಕುಳಿತಿದ್ದರು.

"ಅರೆ ನೀವೇಕೆ ಇಷ್ಟು ಬೇಗ ಎದ್ದಿರಿ? ಇನ್ನೂ ಸ್ವಲ್ಪ ಹೊತ್ತು ಮಲಗಬಹುದಿತ್ತಲ್ಲ" ಎಂದು ಉಪಚಾರದ ಮಾತನಾಡಿದೆ.

"ಇಲ್ಲ, ನನಗೆ ಐದು ಗಂಟೆಗೇ ಏಳುವ ಅಭ್ಯಾಸ. ಹೇಗೆ ಮಲಗಿದರೂ ಐದು ಗಂಟೆಗೆ ಎಚ್ಚರವಾಗಿ ಬಿಡುತ್ತದೆ" ಎಂದರು ನಗುತ್ತಾ.

ಇಬ್ಬರಿಗೂ ಕಾಫಿ ಸರಬರಾಜಾಯಿತು. ಸಮಯಾವಕಾಶ ಕಮ್ಮಿ ಇದ್ದುದ್ದರಿಂದ